ರುದ್ರಾಕ್ಷಿ ಲಿಂಗ ಅಲಂಕಾರಕ್ಕೆ ಮಾತ್ರ ಅಲ್ಲ, ಅಂಗ ಅಲಂಕಾರಕ್ಕೂ ಸೈ ಎನ್ನುತ್ತದೆ ಶೃಂಗಾರ ಲೋಕ. ರುದ್ರಾಕ್ಷಿಯ ಧಾರಣೆ ಮಂಗಳ ನಿವಾರಕ, ಶುಭದಾಯಕ ಎಂದು ಧರ್ಮಾತೀತವಾಗಿ ನಂಬುವವರು ಇದ್ದಾರೆ. ಹಾಗೆಂದು ವೈರಾಗಿಗಳಂತೆ ಧರಿಸಿದರೆ ಅದರಲ್ಲೇನು ಲುಕ್ ಇರುತ್ತೆ? ಅದೆಲ್ಲಾ ಓಲ್ಡ್, ಹೊಸ ಜನರೇಷನ್‌ಗೆ ಮ್ಯಾಚ್ ಆಗುವಂತೆ ಬೆರಗು ಹುಟ್ಟಿಸುವ ಆಭರಣವೇ ಚಂದ ಎನ್ನುತ್ತದೆ ರುದ್ರಾಕ್ಷಿಯ ಆಭರಣ ಜಗತ್ತು.

ಹಾಗಾಗಿಯೇ ಅಧ್ಯಾತ್ಮ ಪರಿಕರ ರುದ್ರಾಕ್ಷಿ ಫ್ಯಾಷನ್ ಪ್ರಿಯರ ಆಲಂಕಾರಿಕ ಪರಿಕರವೂ ಆಗಿದೆ. ಕೊರಳಿಗೆ ಹಾರವಾಗಿ ಇಲ್ಲವೇ ಪೆಂಡೆಂಟ್, ಕಿವಿಯೋಲೆ, ಉಂಗುರದ ಹರಳಾಗಿ, ಕೈ ಮಣಿಕಟ್ಟನ್ನು ಅಲಂಕಾರಿಸುವ ಸೂತ್ರವಾಗಿ ಅಲಂಕರಿಸುತ್ತಿದೆ. ಯೋಗಿಗಳು, ಸಾಧುಗಳು, ಸಂತರು, ಶೈವಪಂಥದವರು ಮಾತ್ರಪಾರಂಪರಿಕವಾಗಿ ರುದ್ರಾಕ್ಷಿ ಧಾರಣೆ ಮಾಡುತ್ತಿದ್ದ ಕಾಲ ಇದಲ್ಲ. ಅವರು ಲೋಹ ಆಭರಣವನ್ನು ನಿರಾಕರಿಸಿ ರುದ್ರಾಕ್ಷಿಯನ್ನೇ ಆಭರಣವೆಂದು ಧರಿಸುತ್ತಿದ್ದರು. ಈಗ ಆಭರಣವನ್ನೇ ರುದ್ರಾಕ್ಷಿಯಲ್ಲಿ ಕಾಣುವ ಕಾಲ ಬಂದಿದೆ. ಆಭರಣಕ್ಕೆ ಮೆರಗು ನೀಡುವ ಹರಳು, ವಜ್ರ, ಮುತ್ತು, ಹವಳ, ಕಲ್ಲಿನಂತೆ, ರುದ್ರಾಕ್ಷಿಯೂ ಅವುಗಳ ಸ್ಥಾನ ಪಡೆದಿದೆ.

ಅದು ಮನಷ್ಯನ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತದೆ. ಕೆಲ ಬಗೆಯ ಚರ್ಮರೋಗ ನಿವಾರಿಸುವ ಔಷಧೀಯ ಗುಣ ಆ ರುದ್ರಾಕ್ಷಿಯಲ್ಲಿ ಇದೆ ಎನ್ನುವ ಅಂಶ ಬೆಳಕಿಗೆ ಬಂದ ನಂತರ ಅಧ್ಯಾತ್ಮ ಸಾಧಕರು, ಜೋತಿಷ್ಯ, ಸಂಖ್ಯಾಶಾಸ್ತ್ರಜ್ಞರು ಅದರ ಬೇರೆ ಬೇರೆ ಉಪಯೋಗಗಳನ್ನು ಪ್ರಚುರಪಡಿಸಿದ್ದಾರೆ. ಅನೇಕರು ಅನೇಕ ಕಾರಣಗಳಿಗೆ ಬೇರೆ ಬೇರೆ ಬಗೆಯಲ್ಲಿ ಧರಿಸಲು ಆರಂಭಿಸಿದ್ದಾರೆ. ಅದು ಪರಂಪರೆಯ ಪಳೆಯುಳಿಕೆಯ ಭಾರದಂತೆ ಕಾಣದೆ ಇರಲಿ ಎನ್ನುವ ಪರಿಕಲ್ಪನೆಯಲ್ಲಿ ಅದಕ್ಕೆ ಆಲಂಕಾರಿಕ ಸ್ಪರ್ಶ ಸಿಕ್ಕಿದೆ. ಸೃಜನಶೀಲ ಕಲೆಯ ಆಕರ್ಷಣೀಯ ರೂಪ ರುದ್ರಾಕ್ಷಿಯನ್ನು ಕ್ರೋಡೀಕರಿಸಿ ವಿವಿಧ ಲೋಹಗಳ ಎರಕದ ನಾನಾ ವಿನ್ಯಾಸದ ಆಭರಣಗಳು ದೇಹವನ್ನು ಅಲಂಕರಿಸುತ್ತಿವೆ. ರುದ್ರಾಕ್ಷಿ ನೇಪಾಳದ ಕಾಡು ಬೆಳೆ. ರುದ್ರಾಕ್ಷ ವೃಕ್ಷದಲ್ಲಿ ಬೆಳೆಯುವ ಬೀಜವನ್ನೇ ರುದ್ರಾಕ್ಷಿ ಎಂದು ಕರೆಯುತ್ತಾರೆ.

ರುದ್ರಾಕ್ಷಿ ದೇಹದ ಶುದ್ಧೀಕರಣದ ಪ್ರತೀಕ. ಇದರಿಂದ ಮನಸ್ಸು ನೆಮ್ಮದಿಯ ತಾಣವಾಗುತ್ತದೆ. ಸದಾ ಪವಿತ್ರಗುಣ ನೆಲೆಗೊಳ್ಳಲು ಪ್ರೇರಕವಾಗುತ್ತದೆ. ಅಧ್ಯಾತ್ಮದ ಬಗ್ಗೆ ಚಿಂತಿಸುವ ಪ್ರಚೋದನೆಯನ್ನು ಇವು ನೀಡುತ್ತವೆ ಎನ್ನುವುದು ನಂಬಿಕೆ ಒಂದೆಡೆ. ಇದರ ಜೊತೆ ಬೇರೆಯವರ ಕಣ್ಣ ದೃಷ್ಟಿ ನಾಟುವುದಿಲ್ಲ. ಋಣಾತ್ಮಕ ಗುಣವನ್ನು ಅದು ನಿವಾರಿಸುತ್ತದೆ ಎನ್ನುವ ಮೂಢನಂಬಿಕೆಯೂ ಇದೆ. ಆ ನಂಬಿಕೆಗೆ ಇಂಬು ಕೊಟ್ಟೋ ಅಥವಾ ಅದನ್ನು ಬಿಟ್ಟೋ ಸೌಂದರ್ಯ ಸಿರಿಯನ್ನು ಹೆಚ್ಚಿಸುತ್ತದೆ ಎಂದರೆ ಏಕೆ ಸಿಂಗರಿಸಿಕೊಳ್ಳಬಾರದು ಎನ್ನುವುದು ಯುವ ಮನಸುಗಳ ಪ್ರಶ್ನೆ.



ದೇಹದ ಅಂದವನ್ನು ಹೆಚ್ಚಿಸಲು ಇದು ಹೇಗೆ ನೆರವಾಗುತ್ತದೆ? ಯಾವ ಗಾತ್ರದ ರುದ್ರಾಕ್ಷಿಗೆ ಯಾವ ರೂಪದಲ್ಲಿ ವಿನ್ಯಾಸಗೊಳಿಸಬೇಕು? ಕಿವಿಗೆ ಲೋಲಕವೋ ನೆಕ್ಲೇಸ್‌ಗೆ ಪೆಂಡೆಂಟೋ ಮಾಡಿಸಿದರೆ ಹೇಗೆ? ಸುತ್ತಲೂ ಚಿನ್ನದ ಅರಗು ಹಾಕಿಸಿದರೆ ಹೇಗಿರುತ್ತದೆ? ಬೆಳ್ಳಿ ಹಾಕಿಸಿದರೆ ಹೇಗೆ ಕಾಣಿಸುತ್ತದೆ? ಮಣಿ– ಮತ್ತಿನ ಸರದ ಮಧ್ಯದಲ್ಲಾದರೆ ಹೇಗಾಗುತ್ತದೆ? ಎನ್ನುವ ಮಾಹಿತಿಯನ್ನೂ ಈಗ ನೀಡುವ ಆಭರಣ ವಿನ್ಯಾಸ ತಜ್ಞರೂ ಇದ್ದಾರೆ.

ರುದ್ರಾಕ್ಷಿಯನ್ನು ಧರಿಸುವುದರಿಂದ ತನುಮನಗಳಲ್ಲಿ ಪವಿತ್ರತೆಯ ಸಂಚಾರವಾಗುತ್ತದೆ. ಪಾಪಗಳ ಸಮೂಹವನ್ನೇ ರುದ್ರಾಕ್ಷಿ ನಾಶಪಡಿಸುತ್ತದೆ ಎಂದು ಹೇಳಲಾಗುತ್ತದೆ. ಬಿಳಿ, ಕೆಂಪು, ಹಳದಿ ಮತ್ತು ಕಪ್ಪು ನಾಲ್ಕು ವರ್ಣಗಳಲ್ಲಿ ರುದ್ರಾಕ್ಷಿ ಸಿಗುತ್ತದೆ. ಶಾಸ್ತ್ರಗಳಿಗೆ ಅನುಗುಣವಾಗಿ ತಮ್ಮ ದೇಹಕ್ಕೆ ಹೊಂದುವ ಬಣ್ಣವನ್ನು ಆಯ್ಕೆ ಮಾಡುತ್ತಾರೆ. ಬಣ್ಣಕ್ಕಿಂತ ಅವುಗಳಲ್ಲಿ ಹಲವು ಮುಖ ಹಾಗೂ ಆಕಾರಗಳಿವೆ. ಅದರಲ್ಲಿ ಅತಿಬೇಡಿಕೆ ಇರುವ ಅಪರೂಪದ ರುದ್ರಾಕ್ಷಿಗಳಿಗೆ ಬೆಲೆ ಹೆಚ್ಚು. ಬಹುತೇಕರು ಹೆಚ್ಚು ಒತ್ತು ನೀಡುವುದು ಅವುಗಳ ಮುಖಕ್ಕೆ. ಏಕಮುಖಿ ರುದ್ರಾಕ್ಷಿಯಲ್ಲಿ ಬಹಳ ಶಕ್ತಿಯಿರುತ್ತದೆ ಎಂದು ಹೇಳಲಾಗುತ್ತದೆ. ರುದ್ರಾಕ್ಷಿ ಚಿಕ್ಕದಾದಷ್ಟು ಅದರ ಶಕ್ತಿ ಉತ್ತರೋತ್ತರವಾಗಿ ವೃದ್ಧಿಯಾಗುತ್ತದೆ ಎನ್ನಲಾಗುತ್ತದೆ. ಆದರೆ ಎಲ್ಲ ರುದ್ರಾಕ್ಷಿಗಳಲ್ಲೂ ಶಿವಶಕ್ತಿ ಜಾಗೃತವಾಗಿರುತ್ತದೆ. ಸರ್ವಪಾಪಗಳನ್ನೂ ವಿನಾಶ ಮಾಡುವ ವಿಶೇಷ ಶಕ್ತಿಯಿರುತ್ತದೆ. ಸುಂದರವಾಗಿರುವ, ಅಖಂಡವಾಗಿರುವ ರುದ್ರಾಕ್ಷಿಯನ್ನು ಧರಿಸಬೇಕು. ತುಂಡಾಗಿರುವ, ಹುಳ, ಹುಪ್ಪಟೆ, ಕೀಟಗಳು ಕಚ್ಚಿರುವ ಇಲ್ಲವೇ ಆಕಸ್ಮಿಕವಾಗಿ ಮುಕ್ಕಾಗಿರುವ ರುದ್ರಾಕ್ಷಿಯನ್ನು ಧರಿಸಬಾರದು ಎನ್ನುವುದೂ ನಂಬಿಕೆಯ ಭಾಗವಾಗಿದೆ.

ಪರಂಪರೆಯ ಅಧ್ಯಾತ್ಮದ ಜಾಗದಲ್ಲಿ ಸಂಖ್ಯಾಶಾಸ್ತ್ರ ಮತ್ತು ಜೋತಿಷ್ಯ ಆಸೀನ ಆಗಿರುವುದರಿಂದ ಭವಿಷ್ಯದ ಉಜ್ವಲತೆಗೆ ಅಡ್ಡಿ ಆತಂಕಗಳು ಎದುರಾಗದಂತೆ ಮಾಡುವ ಭರವಸೆಗಳು ಬೆಳೆದವು. ಅದರ ಅನುಕೂಲಕ್ಕೆ ಹರಳಿನಂತೆ ರುದ್ರಾಕ್ಷಿಯೂ ಸ್ಥಾನ ಪಡೆದಿದೆ. ಜನ್ಮ ನಕ್ಷತ್ರ ಮತ್ತು ಜನ್ಮರಾಶಿಯ ಆಧಾರದ ಮೇಲೆ ಯಾವ ರೀತಿಯ ರುದ್ರಾಕ್ಷಿ ಧರಿಸಬೇಕು ಎನ್ನುವ ಸೂಚನೆಯನ್ನು ತಜ್ಞರು ನೀಡುತ್ತಾರೆ. ರುದ್ರಾಕ್ಷಿಯ ಬಣ್ಣ, ಒಂದರಿಂದ 21 ಮುಖಗಳಿರುವ ಸ್ವರೂಪವನ್ನು ವಿವರಿಸುತ್ತಾರೆ. ಗ್ರಾಹಕರು ತಮ್ಮ ಆರ್ಥಿಕ ಸ್ಥಿತಿ ಗತಿಗೆ ಅನುಗುಣವಾಗಿ ರುದ್ರಾಕ್ಷಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಂತೆಯೇ ತಮ್ಮ ಇಷ್ಟದ ಲೋಹದಲ್ಲಿ ಯಾವ ಪ್ರಮಾಣದಲ್ಲಿ ಎಂತಹ ಆಭರಣ ಸೂಕ್ತವಾಗಬಲ್ಲದು ಎಂಬ ಲೆಕ್ಕಾಚಾರದಲ್ಲಿ ತಮಗೆ ಇಷ್ಟ ಆಗುವ ತಮ್ಮ ದೇಹಕ್ಕೆ ಹೊಂದಿಕೆಯಾಗುವಂತೆ ವಿನ್ಯಾಸ ಮಾಡಿಸಿಕೊಳ್ಳುತ್ತಾರೆ. ■

ಮುಂಬೈ ಮೂಲದ 'ರುದ್ರಾಲೈಫ್' ಎಂಬ ಸಂಸ್ಥೆ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸುತ್ತದೆ. ದೇಶದ ವಿವಿಧ ಪ್ರದೇಶಗಳಲ್ಲಿ ನಿಯಮಿತವಾಗಿ ಪ್ರವಾಸ ಮಾಡುತ್ತದೆ. ಆಗ ವಿಷಯ ಪರಿಣತರಿಂದ ರುದ್ರಾಕ್ಷಿಗಳ ಬಗ್ಗೆ ಉಚಿತ ಸಲಹೆಯನ್ನು ನೀಡಲಾಗುತ್ತದೆ. ಇಷ್ಟಪಟ್ಟು ರುದ್ರಾಕ್ಷಿಯನ್ನು ಆಯ್ಕೆ ಮಾಡಿಕೊಂಡವರಿಗೆ ಕರಕುಶಲಕರ್ಮಿಗಳು ಮಾಲೆಗಳನ್ನು ತಯಾರಿಸಿ ಕೊಡುತ್ತಾರೆ. ನಂತರ ಅನುಕೂಲಕ್ಕೆ ತಕ್ಕಂತೆ ಅಲಂಕಾರಿಕ ಆಭರಣವನ್ನಾಗಿ ಪರಿವರ್ತಿಸಬಹುದು. ಏಕ ಮುಖದಿಂದ 21 ಮುಖದ ರುದ್ರಾಕ್ಷಿಗಳು ಇವರಲ್ಲಿ ಲಭ್ಯ. ಬೆಂಗಳೂರಿನಲ್ಲೂ ಈ ಸಂಸ್ಥೆ ಈಚೆಗೆ ರುದ್ರಾಕ್ಷಿ ಮೇಳ ಏರ್ಪಡಿಸಿತ್ತು. ಮಾಹಿತಿಗೆ: 09322947642.